# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

**ಎಸ್‌ಸಿ. 386/2022**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ರವಿಕುಮಾರ್ | | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆ/ಗಂಡನ ಹೆಸರು** | ಃ ಶ್ರೀ ಕಾಳಯ್ಯ | | **02.03.2024** |
| **ವಯಸ್ಸು** | ಃ 52 ವರ್ಷ | | |
| **ವೃತ್ತಿ** | ಃ ಹೋಂ ಗಾರ್ಡ್ | | **ಪ್ರಾ.ಸಾ. ಃ 02** |
| **ವಾಸಸ್ಥಳ** | ಃ ನಂಜನಗೂಡು | | **ಚಾ.ಸಾ. ಃ 09** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು ಕಳೆದ *10* ವರ್ಷಗಳಿಂದ ಹೋಂ ಗಾರ್ಡ್ ಕೆಲಸ ಮಾಡುತ್ತಿದ್ದೇನೆ. *2019* ರಲ್ಲಿ ನಾನು ನಂಜನಗೂಡು ಸಂಚಾರ ಪೋ.ಠಾಣೆಯಲ್ಲಿ ನನ್ನ ಕರ್ತವ್ಯ ನಿರ್ವಹಿಸುತ್ತಿದ್ದೆ. ದಿಃ*01.11.2019* ರಂದು ಸಂಜೆ *5* ಗಂಟೆಗೆ ನಾನು ಠಾಣೆಯಲ್ಲಿದ್ದಾಗ ಪಿ.ಎಸ್.ಐ ಶಿವಮ್ಮ ಇವರು ವಾಹನಗಳ ತಪಾಸಣೆ ಮಾಡಲು ನಂಜನಗೂಡು ಮೈಸೂರು ಹೆದ್ದಾರಿಯ ತೋಟಗಾರಿಕೆ ಇಲಾಖೆ ಬಳಿ ಕರೆದುಕೊಂಡು ಹೋಗಿದ್ದರು. ಆ ಕಾಲಕ್ಕೆ ನಾವು ವಾಹಗಳನ್ನು ತಪಾಸಣೆ ಮಾಡುತ್ತಿದ್ದೆವು. ಆ ಕಾಲಕ್ಕೆ ಕೆಎ*-41-*ಎಂ.ಸಿ*-4591* ಸಂಖ್ಯೆಯ ಕಾರನ್ನು ನಿಲ್ಲಿಸಿ ಚಾಲಕನನ್ನು ಪಿ.ಎಸ್.ಐ ರವರ ಬಳಿ ಹೋಗಿ ಎಂದು ಹೇಳಿದ್ದೆವು. ಅವರು ಸೀಟ್ ಬೆಲ್ಟ್ ಹಾಕಿರದ ಕಾರಣ ಅವರನ್ನು ಪಿ.ಎಸ್.ಐ ರವರ ಬಳಿ ಕಳುಹಿಸಿದ್ದೆವು. ನಂತರ ಆ ಚಾಲಕ ಪಿ.ಎಸ್.ಐ ರವರ ಜೊತೆ ನಾನು ದಂಡ ಕಟ್ಟುವುದಿಲ್ಲ ಎಂದು ಜಗಳ ಮಾಡಿದ್ದರು. ಆ ಪಿ.ಎಸ್.ಐ ರವರು ಹೈ ಕೋರ್ಟ್ ಆದೇಶವಿದೆ ದಂಡ ಕಟ್ಟಬೇಕು ಎಂದು ಹೇಳಿದ್ದರು. ನೀನು ರಸ್ತೆಯಲ್ಲಿ ಹಗಲು ದರೋಡೆ ಮಾಡುತ್ತಿದ್ದೀಯಾ, ನಮ್ಮನ್ನು ಕಳ್ಳತನ ಮಾಡುತ್ತಾರೆ ಎಂದು ಕೊಂಡಿದ್ದೀಯಾ ಎಂದು

ಬೈದು ಕಾರನ್ನು ಪಿ.ಎಸ್.ಐ ರವರ ಮೇಲೆ ಹತ್ತಿಸಲು ಹೋದಾಗ ಅವರು ಪಕ್ಕಕ್ಕೆ ಹೋಗಿ ತಪ್ಪಿಸಿಕೊಂಡಿದ್ದರು. ಆ ಕಾಲಕ್ಕೆ ನಾನು ಮತ್ತು ಕೀರ್ತಿ ಎನ್ನುವವರು ಹಾಜರಿದ್ದೆವು. ಆ ಚಾಲಕರು ಆ ರೀತಿ ಬೈಯುತ್ತಿರುವಾಗ ನಾನು ಮತ್ತು ಇತರೆ ಪೋಲೀಸರು ಬಿಡಿಸಲು ಪ್ರಯತ್ನ ಮಾಡಿದ್ದೆವು. ಆ ಕಾರು ಚಾಲಕನ ಹೆಸರು ಸುನೀಲ್ ಎಂದು ಗೊತ್ತಾಗಿತ್ತು. ಕೋರ್ಟ್ ಮುಂದೆ ಇರುವ ಆರೋಪಿತನೇ ಆ ಸುನೀಲ್ ಇರುತ್ತಾನೆ. ನಂತರ ಆ ಕಾರು ಚಾಲಕ ದಂಡದ ಹಣವನ್ನು ಪಾವತಿಸಿ ಅಲ್ಲಿಂದ ಹೊರಟು ಹೋಗಿದ್ದರು. ಆ ಕಾರನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ಕೋರ್ಟ್ ಮುಂದೆ ಹಾಜರುಪಡಿಸಿರುವ ಕಾರು ಅದೇ ಇರುತ್ತದೆ. ಈ ಬಗ್ಗೆ ನಾನು ಹೇಳಿಕೆ ಕೊಟ್ಟಿದ್ದೇನೆ.

<u>ಪಾಟೀ ಸವಾಲು ಃ ಆರೋಪಿ ಪರ ವಕೀಲರಾದ ಶ್ರೀ ಜಿ.ಎಸ್.ಎನ್ ರವರಿಂದಃ-</u>

*2.* ನಾನು ದಿನಚರಿ ಬರೆಯಲು ಡೈರಿ ಇಟ್ಟಿರುವುದಿಲ್ಲ. ಠಾಣಾ ದಿನಚರಿಯನ್ನು ನೋಡಿದರೆ ಗುರುತಿಸುತ್ತೇನೆ. ಠಾಣಾ ದಿನಚರಿಯಲ್ಲಿ ಬ್ರಿಜಾ ಕಾರನ್ನು ಹತ್ತಿಸಲು ಪ್ರಯತ್ನಪಟ್ಟ ಎನ್ನುವ ಬಗ್ಗೆ ನಮೂದು ಇಲ್ಲ. ಪಿ.ಎಸ್.ಐ ರವರನ್ನು ತಳ್ಳಿ ನೂಕಾಡಿದ ಬಗ್ಗೆ ಸಹ ನಮೂದು ಇಲ್ಲ ಎಂದರೆ ನಿಜ. ಆ ದಿನ ನಮ್ಮನ್ನು ವಾಹನ ತಪಾಸಣೆಗೆ ಕರೆದುಕೊಂಡು ಹೋದ ಬಗ್ಗೆ ಸಹ ನಮೂದು ಇಲ್ಲ ಎಂದರೆ ನಿಜ. ಆ ದಿನ ನಾನು ರಸ್ತೆಯಲ್ಲಿ ಬರುವ ವಾಹನವನ್ನು ನಿಲ್ಲಿಸುತ್ತಿದ್ದೆ. ನನ್ನಿಂದ ***50*** ಮೀ ದೂರದಲ್ಲಿ ಪಿ.ಎಸ್.ಐ ನಿಂತಿದ್ದರು. ಆ ಸ್ಥಳದಲ್ಲಿ ಬ್ಯಾರಿಕೇಡ್ ಹಾಕಿರಲಿಲ್ಲ. ನಾನು ಮತ್ತು ಕೀರ್ತಿ ಅಜಾಗರೂಕತೆಯಿಂದ ರಸ್ತೆ ಮಧ್ಯಕ್ಕೆ ಹೋಗಿ ವಾಹನ ನಿಲ್ಲಿಸುತ್ತಿದ್ದೆವು ಎಂದರೆ ಸರಿಯಲ್ಲ. ಆ ದಿನ ಆರೋಪಿತನಿಗೆ ಕೊಟ್ಟಿದ್ದ ಚಲನ್ ನಂಬರ್ ಗೊತ್ತಿಲ್ಲ. ಆ ದಿನ ಆರೋಪಿತ

ಕೇವಲ ಸೀಟ್ ಬೆಲ್ಟ್ ಧರಿಸದೇ ಇದುದ್ದಕ್ಕೆ ದಂಡ ಪಾವತಿಸಿದ್ದ ಎಂದರೆ ನಿಜ. ಆ ದಿನ ಆ ಕಾರಿನಲ್ಲಿ ಆರೋಪಿತನನ್ನು ಬಿಟ್ಟು ಬೇರೆ ಯಾರು ಇರಲಿಲ್ಲ. ಅದಕ್ಕೂ ಮೊದಲು ಸಹ ಪಿ.ಎಸ್.ಐ ರವರ ವಿರುದ್ದ ಸಾರ್ವಜನಿಕರ ವಿರುದ್ದ ದುರ್ನಡತೆ ತೋರಿಸಿದ್ದಕ್ಕೆ ಹಲವಾರು ದೂರುಗಳು ಬಂದಿದ್ದವು ಎಂದರೆ ನನಗೆ ಗೊತ್ತಿಲ್ಲ. ಆ ದಿನ ಆರೋಪಿತ ತಳ್ಳಾಟ ಮಾಡಿದ್ದಕ್ಕೆ ನಾವು ಯಾರು ನಂಜನಗೂಡು ಕಾನೂನು ಸುವ್ಯವಸ್ಥೆ ಠಾಣೆಗೆ ಕರೆ ಮಾಡಿ ತಿಳಿಸಿರಲಿಲ್ಲ. ಆ ದಿನ ಮಹದೇವಸ್ವಾಮಿ ಮತ್ತು ಅಮ್ಜದ್ ರವರು ಸಮಾಧಾನಪಡಿಸಿದ್ದರು. ಪಿ.ಎಸ್.ಐ ರವರ ದುರ್ನಡತೆ ಕುರಿತು ಆರೋಪಿತ ವಿಡಿಯೋವನ್ನು ***You-Tube*** ನಲ್ಲಿ ಹಾಕಿದ್ದರಿಂದ ನಾನು, ಪಿ.ಎಸ್.ಐ ಮತ್ತು ಕೀರ್ತಿ ಶಾಮೀಲಾಗಿ ಆರೋಪಿತನ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಆ ದಿನ ನಾನು ಹೇಳುವಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*